# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: :206 (278)
2. ಸದಸ್ಯರ ಹೆಸರು :ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ :06.03.2025
4. ಉತ್ತರಿಸುವ ಸಚಿವರು :ಮುಖ್ಯ ಮಂತ್ರಿ

| ಪ್ರಶ್ನೆ | ಉತ್ತರ |
|---|---|
| ಅ) ಸರ್ಕಾರಿ ನೌಕರರ ವೇತನ ಭತ್ಯೆಗಳ ಪಾವತಿ ಬಿಲ್ಲುಗಳು ವಿಳಂಬವಾಗುತ್ತಿರಲು ಕಾರಣಗಳೇನು; | ಪ್ರತಿ ಆರ್ಥಿಕ ಸಾಲಿನ ಆರಂಭದಲ್ಲಿ, ಆರ್ಥಿಕ ಇಲಾಖೆಯು ಇಲಾಖಾ ಕಾರ್ಯದರ್ಶಿಗಳಿಗೆ ತ್ರೈಮಾಸಿಕ ಕಂತಿನಲ್ಲಿ ಅನುದಾನ ಬಿಡುಗಡೆ ಮಾಡಲು ಅಧಿಕಾರ ಪ್ರತ್ಯಾಯೋಜನೆ ನೀಡಿ ಹೊರಡಿಸುವ ಆದೇಶದ ಅನುಬಂಧ 2 ರನ್ವಯ ಹೊರಗುತ್ತಿಗೆ ವೇತನ ಸೇರಿದಂತೆ ಎಲ್ಲಾ ಬಗೆಯ ವೇತನ ಮತ್ತು ವೇತನಕ್ಕೆ ಸಂಬಂಧಿಸಿದ ಬಾಬ್ತುಗಳನ್ನು **ಏಪ್ರಿಲ್ ಮಾಹೆಯಲ್ಲಿ ಒಂದೇ ಕಂತಿನಲ್ಲಿ ಆರ್ಥಿಕ ಇಲಾಖೆಯ ಅನುಮೋದನೆ ಇದೆಯೆಂದು ಭಾವಿಸಿ ಬಿಡುಗಡೆ ಮಾಡಲು** ಇಲಾಖೆಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.<br><br>ಇದರನ್ವಯ ಇಲಾಖೆಗಳು ವೇತನಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ಖಜಾನೆಗಳಿಗೆ ಸಕಾಲದಲ್ಲಿ ಸಲ್ಲಿಸಿದಲ್ಲಿ, ವೇತನ ಭತ್ಯೆಗಳ ಪಾವತಿಯಲ್ಲಿ ವಿಳಂಬವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಆ) ಬಾಕಿ ಬಿಲ್ಲುಗಳ ಪಾವತಿಗೆ ಆರ್ಥಿಕ ಇಲಾಖೆ ಅನುಮತಿ ನೀಡಿರುವುದಿಲ್ಲವೇ; | ಪ್ರತಿ ಸಾಲಿನಂತೆ 2024-25ನೇ ಸಾಲಿಗೂ ಏಪ್ರಿಲ್ 2024 ರಿಂದ ಮಾರ್ಚ್ 2025 ರವರೆಗೆ ವೇತನಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ಸೆಳೆಯಲು ಆರ್ಥಿಕ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ: ಆಇ 02 ಬಿಪಿಇ 2025, ದಿನಾಂಕ15.01.2025 ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಆದರೆ ಕಾರಣಾಂತರದಿಂದ ವಿವಿಧ ಇಲಾಖೆಗಳಲ್ಲಿ ವೇತನಕ್ಕೆ ಸಂಬಂಧಿಸಿದ ಬಿಲ್ಲುಗಳು ಇನ್ನೂ ಬಾಕಿಯಿರುವುದಾಗಿ ತಿಳಿದುಬಂದ ಹಿನ್ನೆಲೆಯಲ್ಲಿ, ಈ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ದಿನಾಂಕ:15.03.2025 ರವರೆಗೆ ಅವಧಿ ವಿಸ್ತರಿಸಿ ಸರ್ಕಾರದ ಆದೇಶ ಸಂಖ್ಯೆ: ಆಇ 02 |

| | |
|---|---|
| | ಬಿಪಿಇ 2025, ದಿನಾಂಕ:11.03.2025 ನ್ನು ಹೊರಡಿಸಲಾಗಿರುತ್ತದೆ. |
| ಇ) ಕೆಲವು ಇಲಾಖೆಗಳಲ್ಲಿ ಸಂಬಳವನ್ನು ಕಾಂಟಿಜೆನ್ಸಿ (ಏಜೆನ್ಸಿ) ಲೆಕ್ಕ ಶೀರ್ಷಿಕೆಯಲ್ಲಿ ಪಾವತಿ ಮಾಡುತ್ತಿದ್ದು, ಹಣ ಬಿಡುಗಡೆಯಾಗದಿದ್ದರೆ ವೇತನ ಪಾವತಿಯಾಗುವುದಿಲ್ಲವಾದ್ದರಿಂದ ಈ ಬಗ್ಗೆ ಅಗತ್ಯ ಮಾರ್ಪಾಡು ಮಾಡಲು ಏನು ಕ್ರಮ ವಹಿಸಲಾಗಿದೆ. | ವೇತನವನ್ನು Contingency ನಿಧಿಯಿಂದ ನೀಡಲಾಗುವುದಿಲ್ಲ, ಹಾಗೆಯೇ ಸಂಚಿತ ನಿಧಿಯಿಂದ ಪಾವತಿಸಲಾಗುವ ಗುತ್ತಿಗೆ / ಹೊರಗುತ್ತಿಗೆ ನೌಕರರಿಗೆ ಸಂಬಂಧಿಸಿದ ವೇತನವನ್ನೂ ಸಹ ಆರ್ಥಿಕ ಇಲಾಖೆಯ ಅನುಮೋದನೆ ಇದೆಯೆಂದು ಭಾವಿಸಿ, ಒಂದೇ ಕಂತಿನಲ್ಲಿ ಬಿಡುಗಡೆ ಮಾಡಲು ಇಲಾಖೆಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.<br><br>ಅದರನ್ವಯ ಬಿಡುಗಡೆ ಮಾಡುವುದು ಸಂಬಂಧಿಸಿದ ಡಿ.ಡಿ.ಓ ರವರ ಕರ್ತವ್ಯವಾಗಿದೆ. |
| ಈ) ಹೆಚ್.ಆರ್.ಎಂ.ಎಸ್. ಮಾಹಿತಿಯಂತೆ ಎಷ್ಟು ವೇತನ / ಭತ್ಯೆ ಪಾವತಿಗೆ ಬಾಕಿ ಇದೆ; ಬಾಕಿ ಇರುವ ವೇತನ / ಭತ್ಯೆಗಳನ್ನು ಯಾವಾಗ ಪಾವತಿಸಲಾಗುವುದು? | ಹೆಚ್.ಆರ್.ಎಂ.ಎಸ್ ಡೇಟಾಬೇಸ್ ಮಾಹಿತಿಯನ್ವಯ ದಿನಾಂಕ 12.03.2025 ರಲ್ಲಿದ್ದಂತೆ ವೇತನ ಪಾವತಿಯಾಗದೇ ಇರುವ ಸಂಖ್ಯೆ: 14584 ಆಗಿರುತ್ತದೆ. ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿನ ಅಡಚಣೆಗಳು, ನೌಕರರ ಮರಣ, ವರ್ಗಾವಣೆ ಹಾಗೂ ಇತರ ತಾಂತ್ರಿಕ ಕಾರಣಗಳಿಂದಾಗಿ ವೇತನ ಪಾವತಿ ಬಾಕಿ ಉಳಿದಿದ್ದು, ಇವುಗಳನ್ನು HRMS ನಲ್ಲಿ ಸರಿಪಡಿಸಿ ವೇತನಗಳನ್ನು ಸಕಾಲದಲ್ಲಿ ಪಾವತಿಸುವುದು ಸಂಬಂಧಿಸಿದ ಡಿ.ಡಿ.ಓ ರವರ ಜವಾಬ್ದಾರಿಯಾಗಿರುತ್ತದೆ. |

ಸಂಖ್ಯೆ: ಆಇ 06 ಬಿಪಿಎ 2025

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**